ಮಾರ್ಟಿನ್ ಲೇನ್ ಹತ್ತಿರದ ಅಂಗಡಿಗಳಲ್ಲಿ ನೋಡಿದೆ. ಆದರೆ, ಅವಳು ಎಲ್ಲಿಯೂ ಕಾಣಲಿಲ್ಲ. ನನ್ನ ಓವರ್ ಕೋಟಿನ ಜೇಬುಗಳು ಪೋಸ್ಟ್‌ಕಾರ್ಡು, ಚಿತ್ರಗಳು, ಪೆನ್ಸಿಲ್ಸ್ ಮತ್ತು ಇನ್ನಿತರ ವಸ್ತುಗಳಿಂದ ತುಂಬಿ ತುಳುಕುತ್ತಿದ್ದವು. ಇವು ನನಗೆ ಬೇಡವಾದರೂ ಎಲ್ಲ ಅಂಗಡಿಗಳಲ್ಲಿ ಸ್ವಲ್ಪ ಸ್ವಲ್ಪ ಕೊಂಡುಕೊಂಡೆ. ಆದರೆ, ಹುಡುಗಿ ಎಲ್ಲೂ ಸಿಕ್ಕಲಿಲ್ಲ.

ಒಂದು ವಾರ ಕಳೆದು ಮತ್ತೆ ಶನಿವಾರ ಬಂತು. ಆ ಸಸ್ಯಾಹಾರಿ ಹೋಟೆಲ್‌ನಲ್ಲಿ ಮತ್ತೆ ಪ್ರತ್ಯಕ್ಷನಾದೆ. ನಾನು ಹೋಟೆಲ್‌ನಲ್ಲಿ ಕಾಲಿಟ್ಟ ಕೂಡಲೇ ಅದೇ ಟೇಬಲ್ಲಿನಲ್ಲಿ ಅವಳು ಕುಳಿತು ಊಟ ಮಾಡುತ್ತಿದ್ದಳು. ಅವಳ ಟೇಬಲ್ಲಿನ ಎದುರಲ್ಲಿಯೇ ಕುರ್ಚಿ ಹಾಕಿ ಕುಳಿತು, 'ಗುಡ್ ಆಫ್ಟರ್ ನೂನ್' ಎಂದೆ. 'ಗುಡ್ ಆಫ್ಟರ್ ನೂನ್' ಎಂದು ಸಂದೇಹಿಸುತ್ತಾ ಹೇಳಿದಳು. ಒಬ್ಬರಿಗೊಬ್ಬರು ಸಂಕ್ಷಿಪ್ತವಾಗಿ ಗಮನಿಸುತ್ತಾ ನಾನು ಸಂಭಾಷಿಸಲು ಪ್ರಯತ್ನಿಸಿದೆ. ಕೊನೆಗೆ ಅವಳೇ 'ನೀವು ಭಾರತೀಯರಲ್ಲವೇ?' ಎಂದು ಕೇಳಿದಳು.

'ಹೌದು.'

'ಕ್ಷಮಿಸಿ, ನೀವು ಸಸ್ಯಾಹಾರಿನಾ?'

'ಅದನ್ನೇಕೆ ಕೇಳಿದೆ?'

'ಬಹಳಷ್ಟು ಭಾರತೀಯರು ಸಸ್ಯಾಹಾರಿಗಳೆಂದು ನಾನು ಕೇಳಿದ್ದೇನೆ.'

'ನಿನಗೆ ಭಾರತ ದೇಶದ ಬಗ್ಗೆ ಮತ್ತೇನು ಗೊತ್ತಿದೆ?'

'ನನ್ನ ದೊಡ್ಡಣ್ಣ ಭಾರತದಲ್ಲಿ ಸೈನಿಕನಾಗಿದ್ದಾನೆ.'

'ನಾನು ಸಸ್ಯಾಹಾರಿಯೇನೂ ಅಲ್ಲ ಆಗಾಗ ಸಸ್ಯಾಹಾರಿ ಆಹಾರವನ್ನು ಇಷ್ಟಪಡುತ್ತೇನೆ.'

ಹುಡುಗಿಗೆ ಇದರಿಂದ ಬೇಸರವಾದಂತೆ ಅನಿಸಿತು. ಅವಳ ದೊಡ್ಡಣ್ಣನೇ ಅವಳ ಪೋಷಕ ಎಂದು ತಿಳಿಯಿತು. ಅವಳು ವಯಸ್ಸಾದ ತನ್ನ ವಿಧವೆ ತಾಯಿಯ ಹತ್ತಿರ ಲ್ಯಾಂಬ್ರೆಟ್‌ನಲ್ಲಿ ವಾಸಿಸುತ್ತಿದ್ದಾಳೆ.

'ನಿನ್ನ ಅಣ್ಣನ ಬಗ್ಗೆ ತಿಳಿದಿದೆಯಾ?'

'ಬಹಳ ದಿನಗಳಿಂದಲೂ ಅವನಿಂದ ಒಂದು ಪತ್ರವೂ ಬಂದಿಲ್ಲ. ನಮ್ಮ ತಾಯಿ ಬಹಳ ಚಿಂತಿತಳಾಗಿದ್ದಾಳೆ. ಭಾರತ ಬಹಳಷ್ಟು ಹಾವು, ಹುಲಿಗಳಿಂದ, ರೋಗ ರುಜಿನಗಳಿಂದ ಕೂಡಿರುವ ದೇಶ ಎಂದು ಜನರು ಅವಳಿಗೆ ಹೇಳಿದ್ದಾರೆ. ಇದರಿಂದ ಏನಾದರೂ ಅವನಿಗೆ ಆಗಿರಬಹುದೆಂದು ಹೆದರಿದ್ದಾಳೆ. ನಿಜವಾ ಸಾರ್, ನಿಮ್ಮ ದೇಶದಲ್ಲಿ ಹಾವು, ಹುಲಿಗಳು, ರೋಗ ರುಜಿನ ತುಂಬಾ ಇರುತ್ತವಂತೆ.'

'ಇಲ್ಲ', ನಾನು ನಕ್ಕೆ. 'ಹಾಗಿದ್ದರೆ ಅಲ್ಲಿಯ ಜನರು ಹೇಗೆ ಬದುಕುತ್ತಾರೆ?' ಎಂದು ಕೇಳಿದ ಹುಡುಗಿ ಲಘುವಾಗಿ ಉಸಿರುಬಿಡುತ್ತಾ, 'ಒಬ್ಬ ಭಾರತೀಯ ಕಂಡರೆ ನನ್ನ ತಾಯಿ ಈ ಕುರಿತು ಕೇಳಬೇಕೆಂದುಕೊಂಡಿದ್ದಾಳೆ' ಎಂದು ನನ್ನತ್ತ ದೈನ್ಯ ನೋಟ ಹರಿಸಿದಳು.

ನನಗೆ ಅವಳ ಭಾವನೆ ಅರ್ಥವಾಯಿತು. ಆಕೆ ನನ್ನನ್ನು ತನ್ನ ತಾಯಿಗೆ ಪರಿಚಯಿಸುವುದಾಗಿ ಹೇಳಿದಳು.

ಆದರೆ, ನನ್ನನ್ನು ಅವರ ಮನೆಗೆ ಕರೆದೊಯ್ಯುವ ಧೈರ್ಯ ಅವಳಲ್ಲಿರಲಿಲ್ಲ. ಆ ಬಡ ತಾಯಿಯನ್ನು ನೋಡುವ ಒಂದು ಅದಮ್ಯ ಆಕಾಂಕ್ಷೆ ನನ್ನಲ್ಲಿ ಮೂಡಿತು. ಇಂಗ್ಲೆಂಡಿನ ಜನನಿಬಿಡ ಮನೆಯನ್ನು ನೋಡುವ ಅವಕಾಶ ಸಿಕ್ಕಿರಲಿಲ್ಲ. ನಾನು ಈ ದೇಶದಲ್ಲಿರುವ ಬಡ ಜನರು ಹೇಗೆ ವಾಸಿಸುತ್ತಾರೆಂಬುದನ್ನು ತಿಳಿಯಬಯಸಿದೆ.